## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಮಾನ್ಯ ಸದಸ್ಯರ ಹೆಸರು | : | ಶ್ರೀ ಯು.ಬಿ.ವೆಂಕಟೇಶ್ (ನಾಮನಿರ್ದೇಶನ ಹೊಂದಿದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **2021** |
| ಉತ್ತರಿಸಬೇಕಾದ ದಿನಾಂಕ | : | 17.03.2022 |
| ಉತ್ತರಿಸಬೇಕಾದ ಸಚಿವರು | : | ವಸತಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ ಹೋಬಳಿ ಜರಗನಹಳ್ಳಿ ಗ್ರಾಮದ ಸಂ.ನಂ.72/1A, 72/1B ಮತ್ತು 73 ಜಮೀನುಗಳು ನಿರಾಶ್ರಿತರ ವಸತಿ ಯೋಜನೆಗೆ ಭೂಸ್ವಾಧೀನವಾಗಿದೆಯೇ ; ಹಾಗಿದ್ದಲ್ಲಿ, ಎಷ್ಟು ಎಕರೆ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳಲಾಗಿದೆ ; | ಬೆಂಗಳೂರು ದಕ್ಷಿಣ ಉತ್ತರಹಳ್ಳಿ ಹೋಬಳಿ ಜರಗನಹಳ್ಳಿ ಗ್ರಾಮದ ಸ.ನಂ 72/1ಎ, 72/1ಬಿ ಮತ್ತು 73 ರಲ್ಲಿ 2.34 ಎಕರೆ/ಗುಂಟೆ ಜಮೀನು ಸಾರ್ವಜನಿಕ ಉದ್ದೇಶಕ್ಕೆ ಭೂಸ್ವಾಧೀನವಾಗಿರುತ್ತದೆ. ದಿನಾಂಕ:27.02.2012 ರಂದು ಸಹಾಯಕ ಕಾರ್ಯಪಾಲಕ ಅಭಿಯಂತರರು, ಅರೆಕೆರೆ ಉಪವಿಭಾಗ, ಅರೆಕೆರೆ ಮೈಕೋ ಲೇಔಟ್ 1ನೇ ಹಂತ ಬೆಂಗಳೂರು ರವರಿಗೆ ಹಸ್ತಾಂತರವಾಗಿರುತ್ತದೆ(ಸರ್ವೆ ನಂ 72/1ಬಿ ಹಿಸ್ಸಾ ಪೋಡಿಯಾಗಿ ಸರ್ವೆ ನಂ 72/1ಬಿ1, 72/1ಬಿ2, 72/1ಬಿ3, 72/1ಬಿ4, 72/1ಬಿ5, 72/1ಬಿ6, 72/1ಬಿ7 ಮತ್ತು 72/1ಬಿ8 ಎಂದು ಪಹಣಿಯಲ್ಲಿ ನಮೂದಾಗಿರುತ್ತದೆ) ಎಂದು ಜಿಲ್ಲಾಧಿಕಾರಿಗಳು,ಬೆಂಗಳೂರು ಇವರು ವರದಿ ಮಾಡಿರುತ್ತಾರೆ. |
| ಆ) | ಭೂ ಸ್ವಾಧೀನ ಕುರಿತು ಭೂ ಮಾಲೀಕರು ನ್ಯಾಯಾಲಯದಲ್ಲಿ/ ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ದಾವೆಯನ್ನು ಸಲ್ಲಿಸಿರುತ್ತಾರೆಯೇ ; ಸಲ್ಲಿಸಿದ್ದಲ್ಲಿ, ಯಾವ ಹಂತದಲ್ಲಿದೆ ; | ಕರ್ನಾಟಕ ಮೇಲ್ಮನವಿ ನ್ಯಾಯಾಧಿಕರಣದಲ್ಲಿ ದಾವೆ ಸಂಖ್ಯೆ:ಆರ್.ಇ.ವಿ/ಎ.ಪಿ.ಎಲ್.250/2012 ರಂತೆ ಪ್ರಕರಣ ಚಾಲ್ತಿಯಲ್ಲಿರುತ್ತದೆ ಎಂದು ಜಿಲ್ಲಾಧಿಕಾರಿಗಳು, ಬೆಂಗಳೂರು ಇವರ ವರದಿ ಮಾಡಿರುತ್ತಾರೆ. |
| ಇ) | ಈ ವಿವಾದಿತ ಜಮೀನಿನಲ್ಲಿ ನಿವೇಶನಗಳಿಗೆ ಕಂದಾಯವನ್ನು ಪಾವತಿಸಿ ಕೊಂಡು ಖಾತಾ ನೀಡುವುದಕ್ಕೆ ಬಿ.ಬಿ.ಎಂ.ಪಿ ಗೆ ಪ್ರತ್ಯೇಕವಾಗಿ ಸರ್ಕಾರ ಆದೇಶವನ್ನು ನೀಡಲಾಗಿದೆಯೇ ; ಹಾಗಿದ್ದಲ್ಲಿ ಅಕ್ರಮವಾಗಿ ಖಾತಾ ಮಾಡುತ್ತಿರುವ ಅಧಿಕಾರಿಗಳ ವಿರುದ್ಧ ಸರ್ಕಾರ ಕೈಗೊಂಡಿರುವ ಕ್ರಮಗಳೇನು ? | ಪ್ರಸ್ತಾಪಿತ ಜಮೀನಿನಲ್ಲಿ ನಿವೇಶನಗಳಿಗೆ ಆಸ್ತಿ ತೆರಿಗೆಯನ್ನು ಪಾವತಿಸಿಕೊಂಡು ಖಾತಾ ನೀಡುವುದಕ್ಕೆ ಬೆಂಗಳೂರು ಮಹಾನಗರ ಪಾಲಿಕೆಗೆ ಸರ್ಕಾರದಿಂದ ಯಾವುದೇ ಪ್ರತ್ಯೇಕ ಆದೇಶ ನೀಡಿರುವುದಿಲ್ಲ. ಸದರಿ ಜಮೀನಿನ ನಿವೇಶನಗಳಿಗೆ ಅಕ್ರಮ ಖಾತೆಯನ್ನು ಮಾಡಿರುವುದಿಲ್ಲ ಎಂದು ವಿಶೇಷ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಇವರು ವರದಿ ಮಾಡಿರುತ್ತಾರೆ. |

ಸಂಖ್ಯೆ :ವಇ 99 ಹೆಚ್‌ಎಂ 2022

**(ವಿ. ಸೋಮಣ್ಣ)**
ವಸತಿ ಮತ್ತು ಮೂಲಸೌಲಭ್ಯ
ಅಭಿವೃದ್ಧಿ ಸಚಿವರು